ಕೊಡಬೇಕಾಗುತ್ತದೆ. ನಾನು ಅವರಿಗೆ ತಮ್ಮ ಪರವಾಗಿ ಪತ್ರ ಬರೆದು ಕೊಡಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ :— ನಮಗೆ ರೂಟೀಸ್‌ನಲ್ಲಿ ಕೊಡುವುದನ್ನು ಸಚಿವರು ಹೇಳಿದ್ದಾರೆ. ನಾನು ವಿಶೇಷ ಅನುದಾನದ ಬಗ್ಗೆ ಕೇಳುತ್ತಿದ್ದೇನೆ. ಸುಮಾರು 3 ಕೋಟಿ 12 ಲಕ್ಷ ರೂ.ಗಳ ಅಂದಾಜು ಆ ಗಲಭೆಯಲ್ಲಿ ನಷ್ಟ ಸಂಭವಿಸಿದೆ. ಮುನ್ಸಿಪಾಲಿಟಿ ಆಸ್ತಿಯ ನಷ್ಟದ ಬಗ್ಗೆ ನಿಮ್ಮ ಇಲಾಖೆಯವರೇ ಅಂದಾಜು ಮಾಡಿಕೊಂಡು ಬಂದಿದ್ದಾರೆ. ಅದರ ಎದುರು ನೀವು ಕೇವಲ 25 ಲಕ್ಷ ರೂ.ಗಳನ್ನು ರಿಲೀಸ್ ಮಾಡಿದ್ದೀರಿ. ಮಾನ್ಯ ಕಂದಾಯ ಸಚಿವರಲ್ಲಿ ಮನವಿ ಮಾಡುವುದೇನೆಂದರೆ ಗದಗ ನಗರಸಭೆಗೆ ವಿಶೇಷ ಅನುದಾನವನ್ನು ಹಣಕಾಸಿನ ವರ್ಷದಲ್ಲಿ ರಿಲೀಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮೀರಾಜುದ್ದೀನ್ ಪಟೇಲ್ :— ಈ ತರಹದ ನಷ್ಟ ಸಂಭವಿಸಿದಲ್ಲಿ ನೆರವು ನೀಡುವ ಯಾವ ಪ್ರಾವಿಶನ್ ಇಲ್ಲದಿದ್ದರೂ ಕೂಡ 25 ಲಕ್ಷ ರೂ.ಗಳನ್ನು ನಾವು ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ನಮ್ಮಲ್ಲಿ ಬಂದರೆ ಆ ಕುರಿತು ಚರ್ಚೆ ಮಾಡೋಣ. ಸಿ.ಆರ್. ಫಂಡ್‌ನಿಂದ ಹೇಗೆ ನೆರವು ದೊರಕಿಸಿಕೊಳ್ಳಬಹುದು ಎಂದು ಮಾನ್ಯ ಕಂದಾಯ ಸಚಿವರಲ್ಲಿ ಚರ್ಚೆ ಮಾಡೋಣ.

ವಿಜಾಪುರ ನಗರ ಕೈಗಾರಿಕಾ ಪ್ರದೇಶದಲ್ಲಿನ ಪ್ಲಾಟುಗಳಿಗೆ ನಿಗದಿಪಡಿಸಿರುವ ಬೆಲೆ.

36(134) ಶ್ರೀ ಬಸವಗೌಡ ರಾಮನಗೌಡ ಪಾಟೀಲ್ (ಬಿಜಾಪುರ) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಯೋಜನೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರದ ಕೈಗಾರಿಕಾ ಪ್ರದೇಶಗಳಲ್ಲಿನ ಪ್ರತಿಯೊಂದು ಪ್ಲಾಟುಗಳಿಗೆ ನಿಗದಿಪಡಿಸಿರುವ ಮೊಬಲಗು ಎಷ್ಟು?

ಆ) ಅನೇಕ ವರ್ಷಗಳ ಹಿಂದೆ ಮಂಜೂರಾತಿ ಮಾಡಿದ ಪ್ಲಾಟುಗಳಿಗೆ ಪ್ರಸಕ್ತ ನಿಗದಿಪಡಿಸಿದ ಬೆಲೆಗೆ ಹಣ ತುಂಬಲು ನೋಟೀಸ್ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಪ್ರತಿ ಎಕರೆಗೆ ಪ್ರಸಕ್ತ ನಿಗಧಿಪಡಿಸಿರುವ ಮೊಬಲಗು ಎಷ್ಟು?

ಈ) ಬಿಜಾಪುರ ಜಿಲ್ಲೆಯು ಅತ್ಯಂತ ಹಿಂದುಳಿದ ಪ್ರದೇಶವಾಗಿರುವುದರಿಂದ ಜಿಲ್ಲೆಯ ಕೈಗಾರಿಕಾ ಪ್ರದೇಶಗಳಲ್ಲಿನ ಪ್ಲಾಟುಗಳಿಗೆ ಪ್ರಸಕ್ತ ನಿಗಧಿಪಡಿಸಿರುವ ಮೊಬಲಗು ಸೂಕ್ತವೇ?

ಶ್ರೀ ಬಿ.ಎಲ್. ಶಂಕರ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸೌಲಭ್ಯ ಅಭಿವೃದ್ಧಿ ಯೋಜನೆಗಳ ಸಚಿವರು) :—

ಅ) ಬಿಜಾಪುರ ಜಿಲ್ಲೆಯ ಮಹಲ್ಬಗಾಯತ್ ಕೈಗಾರಿಕಾ ಪ್ರದೇಶದಲ್ಲಿ ಹಂಚಿಕೆಗೆ ಲಭ್ಯವಿರುವ ಸುಮಾರು ಹತ್ತು ಎಕರೆ ಜಮೀನಿಗೆ ಮತ್ತು ಅಲಿಯಾಬಾದ್ ಕಿರು ಬೆಳವಣಿಗೆ ಕೇಂದ್ರದಲ್ಲಿ ಅಭಿವೃದ್ಧಿಪಡಿಸಿರುವ ಜಮೀನಿಗೆ ನಿಗಧಿಪಡಿಸಿರುವ ತಾತ್ಕಾಲಿಕ ಬೆಲೆಯು ಎಕರೆ ಒಂದಕ್ಕೆ ರೂ. 3,34.000-00 ಆಗಿರುತ್ತದೆ.

24.1.83 ರಂದು ಅನುಮೋದಿತ ಮಹಲ್ಬಾಗಾತ್ ಕೈಗಾರಿಕಾ ಪ್ರದೇಶದಲ್ಲಿ ಎಕರೆ ಒಂದಕ್ಕೆ ರೂ. 15.000-00 ಹಾಗೂ 25.000-00 ತಾತ್ಕಾಲಿಕ ದರದಂತೆ ಹಂಚಿಕೆಯಾಗಿರುವ ಜಮೀನಿಗೆ ಅಂತಿಮ ಬೆಲೆಯನ್ನು ಎಕರೆ ಒಂದಕ್ಕೆ 2.23.000-00 ರೂ.ರಂತೆ ನಿಗಧಿಪಡಿಸಿದೆ.

ಆ) ಮೇಲೇ ಹಾಣಿಸಿದಂತೆ ಮಹಲ್ಬಗಾಯತ್ ಕೈಗಾರಿಕಾ ಪ್ರದೇಶದಲ್ಲಿ ಎಕರೆ ಒಂದಕ್ಕೆ 15.000-00 ಹಾಗೂ 25.000-00 ತಾತ್ಕಾಲಿಕ ದರದಂತೆ ಈ ಹಿಂದೆ ಹಂಚಿಕೆ ಮಾಡಿದ್ದ ಮಂಜೂರುದಾರರಿಗೆ ಅಂತಿಮ ಬೆಲೆಯಾದ ಎಕರೆ ಒಂದಕ್ಕೆ ರೂ. 2.23.000-00 ದಂತೆ ವ್ಯತ್ಯಾಸದ ಹಣವನ್ನು ತುಂಬಲು ನೋಟೀಸುಜಾರಿ ಮಾಡಲಾಗಿದೆ.

ಇ) ಪ್ರತಿ ಎಕರೆಗೆ ಪ್ರಸಕ್ತ ನಿಗಧಿಪಡಿಸಿರುವ ತಾತ್ಕಾಲಿಕ ಬೆಲೆಯು ರೂ. 3.34.000-00 ಆಗಿರುತ್ತದೆ.

ಮಹಲ್ಬಗಾಯತ್ ಕೈಗಾರಿಕಾ ಪ್ರದೇಶದಲ್ಲಿ ಈಗಾಗಲೇ ತೊಡಗಿಸಿರುವ ಬಂಡವಾಳ ಮತ್ತು ಅಲಿಯಾ ಬಾದ್‌ನ ಕಿರು ಬೆಳವಣಿಗೆ ಕೇಂದ್ರದ ಅಭಿವೃದ್ಧಿಗಾಗಿ ತೊಡಗಿಸಲು ಉದ್ದೇಶಿಸಿರುವ ಬಂಡವಾಳವನ್ನು ಗಣನೆಗೆ ತೆಗೆದುಕೊಂಡರೆ ಈಗ ನಿಗಧಿಪಡಿಸಿರುವ ಬೆಲೆಯು ಬಹಳ ಕಡಿಮೆಯಾದರೂ ಸಹ ಬಿಜಾಪುರ ಜಿಲ್ಲೆಯು ಹಿಂದುಳಿದ ಜಿಲ್ಲೆಯಾಗುವುದರಿಂದ ಈ ಕೈಗಾರಿಕಾ ಪ್ರದೇಶಗಳಲ್ಲಿ ರಿಯಾಯಿತಿಯ ದರದಲ್ಲಿ ಬೆಲೆಯನ್ನು ನಿಗಧಿಪಡಿಸಿದೆ.

12.10 ಪಿ.ಎಂ.

ಶ್ರೀ ಬಸವನಗೌಡ ರಾಮನಗೌಡ ಪಾಟೀಲ್ :— ಮಾನ್ಯ ಅಧ್ಯಕ್ಷರೇ, ವಿದೇಶದಿಂದ ಬರುವ ಉದ್ಯಮಿಗಳಿಗೆ ಉಚಿತವಾಗಿ ಪ್ಲಾಟುಗಳನ್ನು ಕೊಡುತ್ತಿದ್ದಾರೆ. ದುರಂತ ಏನೆಂದರೆ ಬಿಜಾಪುರದಲ್ಲಿ 25 ಸಾವಿರ ರೂಪಾಯಿಗಳಿಗೆ ಒಂದು ಪ್ಲಾಟನ್ನು ಕೊಟ್ಟಿದ್ದೇವೆ ಎಂದು ಮೊದಲೇ ಘೋಷಣೆ ಮಾಡಿ ಇವತ್ತು 2 ಲಕ್ಷದ 23 ಸಾವಿರ ರೂಪಾಯಿಗಳನ್ನು ತುಂಬಬೇಕೆನ್ನುವ ನೋಟೀಸನ್ನು ಅಲ್ಲಿಯ ಕೈಗಾರಿಕೋದ್ಯಮಿಗಳಿಗೆ ಕೊಟ್ಟಿದ್ದಾರೆ. ಯಾವುದು ಜಿಲ್ಲೆ ಹಿಂದುಳಿದ ಕೈಗಾರಿಕಾ ಪ್ರದೇಶ ಎಂದು ಘೋಷಣೆಯಾದ ಜಿಲ್ಲೆಯಲ್ಲಿ ಈ

ರೀತಿ ಮಾಡಿರುವುದು ಸರಿಯೇ? ಎರಡನೆಯದು, ಯಾವ ಪ್ಲಾಟುಗಳನ್ನು ಖರೀದಿ ಮಾಡಿದ್ದಾರೆ, ಕಳೆದ 5 ವರ್ಷದಲ್ಲಿ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಸುತ್ತಮುತ್ತ ಜಮೀನಿನ ಬಗ್ಗೆ ನೊಂದಣಿ ಎಷ್ಟಕ್ಕೆ ಆಗಿದೆ, ಅದರ ಬಗ್ಗೆ ತನಿಖೆ ಮಾಡಬೇಕು. ಏಕೆಂದರೆ ಕೇವಲ 1983ರಲ್ಲಿ ಖರೀದಿ ಮಾಡಿದ ಜಮೀನು ಕಿಮ್ಮತ್ತು ಬಹಳವಾದರೆ 5 ರಿಂದ 10 ಸಾವಿರ ರೂಪಾಯಿ ಇರಬಹುದು. ಇವತ್ತು 2 ಲಕ್ಷದ 34 ಸಾವಿರ ರೂಪಾಯಿಗಳನ್ನು ಕೈಗಾರಿಕೋದ್ಯಮಿಗಳು ತುಂಬಬೇಕೆಂದರೆ ಎಲ್ಲಿ ಸಾಧ್ಯ ಇದೆ. ಬಿಜಾಪುರದಲ್ಲಿ ಎಲ್ಲಾ ಉದ್ಯಮಗಳು ಬಂದ್ ಆಗುತ್ತಿವೆ. ಅಂಥ ಪರಿಸ್ಥಿತಿಯಲ್ಲಿ 3 ಲಕ್ಷದ 34 ಸಾವಿರ ರೂಪಾಯಿ ತಾತ್ಕಾಲಿಕ ಬೆಲೆ ಎಂದು ಸನ್ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ದುರಂತವೆಂಧರೆ ಬಿಜಾಪುರದಲ್ಲಿ 3 ಲಕ್ಷದ 34 ಸಾವಿರ ರೂಪಾಯಿಗಳನ್ನು ತುಂಬುವುದಕ್ಕಾಗುವುದಿಲ್ಲ ಕೈಗಾರಿಕೋದ್ಯಮಿಗಳು ಅಂಥ ಪರಿಸ್ಥಿತಿಯಲ್ಲಿ ಸರ್ಕಾರದ ಪ್ರಾಮಾಣಿಕವಾದ ಕಳಕಳಿ ಇದೆಯೇ? ಈ ರಾಜ್ಯದ ಜನರು ಏನಾದರೂ ಕೈಗಾರಿಕೆಗಳನ್ನು ತೆಗೆಯುವ ಬಗ್ಗೆ ಕಳಕಳಿ ಇದೆಯೇ? ಟೊಯೆಟೊ, ಕಿರ್ಲೋಸ್ಕರ್ ಕಂಪನಿಗೆ ಹೋಗಿದ್ದೆ. 400 ಎಕರೆಯನ್ನು ಸರ್ಕಾರ ಉಚಿತವಾಗಿ ಅವರಿಗೆ ಕೊಟ್ಟಿದೆ. ದುರಂತವೆಂದರೆ ನಮ್ಮ ಜಿಲ್ಲೆಯ ಜನರು ಉದ್ಯೋಗ ಮಾಡಬೇಕಾದರೆ ಮೂರು-ಮೂರೂವರೆ ಲಕ್ಷ ರೂಪಾಯಿಗಳನ್ನು ಇವತ್ತು ಒಂದು ಎಕರೆಗೆ ನಿಗದಿ ಮಾಡಿದರೆ ಏನಾದರೂ ಕೈಗಾರಿಕೆಗಳು ಬೆಳೆಯುವುದಕ್ಕೆ ಸಾಧ್ಯ ಇದೆಯೇ ಎನ್ನುವ ಬಗ್ಗೆ ಉತ್ತರ ಕೊಡಬೇಕೆಂದುಕೇಳುತ್ತೇನೆ.

ಶ್ರೀ ಬಿ.ಎಲ್. ಶಂಕರ್ (ಬೃಹತ್ ಮತ್ತು ಮಧ್ಯಮ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಯೋಜನೆಗಳ ಸಚಿವರು) :— ಮಾನ್ಯ ಅಧ್ಯಕ್ಷರೇ, ಬಿಜಾಪುರದಲ್ಲಿ ಎರಡು ಕೈಗಾರಿಕಾ ಪ್ರದೇಶಗಳು ಇವೆ. ಒಂದು ಮಹಲ್ಬಗಾಯತ್, ಮತ್ತೊಂದು ಅಲಿಯಾಬಾದ್ ಎನ್ನುವುದು. ಒಂದು 212.5 ಎಕರೆ ಇದೆ. ಅದರಲ್ಲಿ ನಮಗೆ ಕಾಸ್ಟ್ ಆಫ್ ಅಕ್ವಿಜಿಷನ್, ಡೆವಲಪ್‌ಮೆಂಟ್ ಎಲ್ಲಾ ಸೇರಿ ಒಂದು ಎಕರೆಗೆ 2 ಲಕ್ಷದ 91 ಸಾವಿರ ರೂಪಾಯಿ ಬೀಳುತ್ತದೆ. ಅದನ್ನು ನಾವು 2 ಲಕ್ಷದ 23 ಸಾವಿರ ರೂಪಾಯಿಗೆ ಅಲಾಟ್‌ಮೆಂಟ್ ಮಾಡುತ್ತಿದ್ದೇವೆ. ಪ್ರತಿ ಎಕರೆಗೆ ಕರ್ನಾಟಕ ಸರ್ಕಾರಕ್ಕೆ 70 ಸಾವಿರ ರೂಪಾಯಿಗಳಿಗೆ ಕಡಿಮೆ ಅಲಾಟ್‌ಮಾಡುತ್ತಿದ್ದೇವೆ. ಅಲಿಯಾಬಾದ್ ಇಂಡಸ್ಟ್ರಿಯಲ್ ಏರಿಯಾ ಎನ್ನುವುದು 158 ಎಕರೆ ಇದೆ. ಅಲ್ಲಿ ಪ್ರತಿ ಎಕರೆಗೆ ನಮಗೆ ಬೀಳುವ ಕಾಸ್ಟ್ 6 ಲಕ್ಷದ 5 ಸಾವಿರ ರೂಪಾಯಿ ಬೀಳುತ್ತಿದೆ. 3 ಲಕ್ಷದ 34 ಸಾವಿರ ರೂಪಾಯಿಗಳಿಗೆ ನಾವು ಅದನ್ನು ಇವತ್ತು ಅಲಾಟ್‌ಮಾಡುತ್ತಿದ್ದೇವೆ ನಾವು ಇದನ್ನು 1983ನೇ ಇಸವಿಯಲ್ಲಿ ಅಕ್ವಿಜಿಷನ್ ಪ್ರಾರಂಭಮಾಡಿ ಅದು ಕೋರ್ಟಿಗೆ ಹೋಗಿರುವ ಕಾರಣದಿಂದ ಅಕ್ವಿಜಿಷನ್ ಕಾಸ್ಟ್ ಜಾಸ್ತಿಯಾಗಿರುವ ಕಾರಣದಿಂದ ಮಹಲ್ಬಗಾಯತ್ ಇಂಡಸ್ಟ್ರಿಯಲ್ ಏರಿಯಾದಲ್ಲಿ ಇದುವರೆಗೆ ಸುಮಾರು ನಮಗೆ 400 ಲಕ್ಷ ರೂಪಾಯಿಗಳಷ್ಟು ನಷ್ಟವಾಗುತ್ತಿದೆ ಈ ಅಲಾಟ್‌ಮೆಂಟ್ ರೇಟ್ ಫಿಕ್ಸ್ ಮಾಡಿದನಂತರವೂ ಕೂಡ.

ಹಾಗಾಗಿ ಕೈಗಾರಿಕೆಗಳಿಗೆ ಹಿಂದುಳಿದ ಪ್ರದೇಶ ಬಿಜಾಪುರ, ಅಲ್ಲಿ ಹೆಚ್ಚಿನ ಇನ್‌ಸೆಂಟೀವ್ಸ್ ಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಅದನ್ನು ನಾನು ತಾತ್ವಿಕವಾಗಿ ಒಪ್ಪುತ್ತೇನೆ. ಆದರೆ ಕಾಸ್ಟ ಆಫ್ ಆಕ್ವಿಜಿಷನ್ ಮತ್ತು ಅದನ್ನು ಡೆವಲಪ್‌ಮೆಂಟ್ ಮಾಡುವುದಕ್ಕೆ ಬೇಕಾಗಿರುವ ಕಾಸ್ಟ್‌ನ್ನು ಅಲಾಟ್‌ಮೆಂಟ್ ರೇಟಿನಲ್ಲಿ ಯಾವುದೇ ರಿಯಾಯಿತಿಯನ್ನು ತೋರಿಸಲಿಕ್ಕೆ ಸಾಧ್ಯವಿಲ್ಲ. ಅಲ್ಲಿ ಬರುವ ಕೈಗಾರಿಕೆಗಳಿಗೆ ಬೇರೆ ಎಲ್ಲಾ ಕೈಗಾರಿಕೆಗಳಿಗೆ ಕೊಡುವ ಇನ್‌ಸೆಂಟೀವ್ಸ್ ಏನು ಇದೆ, ಅದನ್ನು ಕೊಡುವ ಬಗ್ಗೆ ಖಂಡಿತವಾಗಿಯೂ ಕೂಡ ಕರ್ನಾಟಕ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಬಸವನಗೌಡ ರಾಮನಗೌಡ ಪಾಟೀಲ್ :— ಮೂಲ ಸಮಸ್ಯೆ ಏನಾಗಿದೆ ಎಂದರೆ ಇವತ್ತಿನವರೆಗೂ ಸಬ್-ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಆ ಕೆ.ಐ.ಎ.ಡಿ.ಬಿ. ಸುತ್ತಮುತ್ತ ಇದ್ದಂಥ ಪ್ರದೇಶದ ಜಮೀನುಗಳು ಎಷ್ಟಕ್ಕೆ ವ್ಯಾಪಾರವಾಗಿದೆ ಎನ್ನುವ ಬಗ್ಗೆ ನೀವು ದಾಖಲೆಗಳನ್ನು ತರಿಸಿ. 10-20 ಸಾವಿರ ರೂಪಾಯಿಗಳಿಗೆ ರೈತರು ಮಾರುವುದಕ್ಕೆ ಹೋದರೆ ಯಾರು ಜಮೀನನ್ನು ತೆಗೆದುಕೊಳ್ಳುವುದಿಲ್ಲ. ಕೆಲವೊಂದು ಭ್ರಷ್ಟ ರಾಜಕಾರಣಿಗಳು ಆ ಜಮೀನುಗಳನ್ನು ಖರೀದಿ ಮಾಡಿ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಖರೀದಿ ಹಾಕಿಕೊಡುತ್ತಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ನಾನು ಕೇಳುತ್ತೇನೆ. ತಮ್ಮಿಂದ ಏನಾದರೂ ಸೂಕ್ತ ಪರಿಹಾರ ಕೊಡುತ್ತೀರಿ ಎಂದು ನಾನು ನಿರೀಕ್ಷೆ ಮಾಡುತ್ತಿದ್ದೇನೆ.

ಶ್ರೀ ಬಿ.ಎಲ್. ಶಂಕರ್ :— ಮಾನ್ಯ ಅಧ್ಯಕ್ಷರೇ, ಸರ್ಕಾರ ನಿಗದಿ ಮಾಡಿರುವ ಆಕ್ವಿಜಿಷನ್ ಕಾಸ್ಟ್ ಕಡಿಮೆಯಾಯಿತು ಎಂದು ಹೇಳಿ ಬಹಳಷ್ಟು ಜನರು ಸಿವಿಲ್ ಕೋರ್ಟುಗಳಿಗೆ ಹೋದ ಕಾರಣದಿಂದ ಕೋರ್ಟಿನ ತೀರ್ಮಾನದಲ್ಲಿ ಕೆಲವು ಆಕ್ವಿಜಿಷನ್ ಕಾಸ್ಟ್ ಜಾಸ್ತಿಯಾದ ಸಂದರ್ಭ ಬಂದಿದ್ದರಿಂದ ಮೊದಲನೇ ಮಹಲ್ಬಗಾಯತ್ ಇಂಡಸ್ಟ್ರೀಯಲ್ ಏರಿಯಾದಲ್ಲಿ ನಾವು ಆಕ್ವಿಜಿಷನ್ ಮಾಡುವ ಒರಿಜಿನಲ್ ಕಾಸ್ಟ್‌ಗೂ ಈಗಿನ ಕಾಸ್ಟ್‌ಗೂ ಬಹಳಷ್ಟು ವ್ಯತ್ಯಾಸವಾಗಿದೆ. ಅದರ ಪಕ್ಕದಲ್ಲೇ ಅಲಿಯಾಬಾದ್ ಬರುವ ಕಾರಣದಿಂದ ಅದಕ್ಕಿಂತ ಕಡಿಮೆಗೆ ಅಲ್ಲಿ ಭೂಮಿ ಕೊಳ್ಳುವುದಕ್ಕೆ ಸಾಧ್ಯ ಇಲ್ಲ ಎನ್ನುವ ಕಾರಣದಿಂದ ಅಲ್ಲಿ ಸುಮಾರು ಒಂದು ಎಕರೆ ಆಕ್ವಿಜಿಷನ್‌ಗೆ ಡೆವಲಪ್‌ಮೆಂಟ್ ಎಲ್ಲಾ ಸೇರಿ 6 ಲಕ್ಷದ 5 ಸಾವಿರ ರೂಪಾಯಿಗಳು ಬರುತ್ತಿದೆ. ಇದರಲ್ಲಿ ಲ್ಯಾಂಡ್-ಆಕ್ವಿಜಿಷನ್‌ನಲ್ಲಿ ಅಥವಾ ಅಲ್ಲಿ ಪಕ್ಕದಲ್ಲಿರುವ ಜಮೀನಿಗೆ ಬಹಳ ಹೆಚ್ಚಿನ ದರದಲ್ಲಿ ನಾವು ಇದನ್ನು ಆಕ್ವಿಜಿಷನ್ ಮಾಡಿ ಅಲ್ಲೇನಾದರೂ ದುರ್ವ್ಯವಹಾರ ನಡೆದಿದೆ ಎನ್ನುವ ಮಾತನ್ನು ಸದನದ ಗಮನಕ್ಕೆ ಸನ್ಯಾಸ್ಯ ಶಾಸಕರೇನು ತಂದಿದ್ದಾರೆ, ಅದನ್ನು ಖಂಡಿತವಾಗಿಯೂ ಕೂಡ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಗೋವಿಂದ ಕಾರಜೋಳ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದರು ಕೋರ್ಟಿಗೆ ಹೋದ ಕಾರಣದಿಂದ ಭೂಮಿ ಬೆಲೆ ಹೆಚ್ಚಾಗಿದೆ ಎಂದು.

ಕೋರ್ಟಿಗೆ ಹೋದ ಕಾರಣದಿಂದ ಭೂಮಿ ಬೆಲೆ ಎಷ್ಟು ಹೆಚ್ಚಾಗಿದೆ, ಅದನ್ನು ಸರ್ಕಾರವೇ ಭರಿಸಲಿಕ್ಕೆ ಸಾಧ್ಯ ಇದೆ. ಕೈಗಾರಿಕಾ ಪ್ರದೇಶದಲ್ಲಿ ಬಿಜಾಪುರ ಜಿಲ್ಲೆ ಹಿಂದುಳಿದ ಪ್ರದೇಶ. ಕೈಗಾರಿಕಾಭಿವೃದ್ಧಿ ನೀರಾವರಿ ಅಭಿವೃದ್ಧಿಯಾಗಿಲ್ಲ. ಅದೊಂದು ವಿಶೇಷ ಪ್ರಕರಣ ಎಂದು ಹೇಳಿ ಪರಿಗಣಿಸಿ ಸರ್ಕಾರವೇ ಹೆಚ್ಚಿನ ಹಣವನ್ನು ಭರಿಸಿ ಸಬ್ಸಿಡಿ ರೇಟಿನಲ್ಲಿ ಪ್ಲಾಟುಗಳನ್ನು ಅಲಾಟ್‌ಮೆಂಟ್ ಮಾಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಸನಗೌಡ ರಾಮನಗೌಡ ಪಾಟೀಲ್ :— ಇದೇ ಪರಿಸ್ಥಿತಿ ಮುಂದುವರಿಸಿದರೆ ಇದ್ದಂಥ ಎಲ್ಲಾ ಉದ್ಯಮಗಳು ಇವತ್ತು ಮುಚ್ಚಿಹೋಗುತ್ತವೆ. ಮೂರು-ನಾಲ್ಕು ಉದ್ಯಮಗಳು ಇರಬಹುದು. 3 ಲಕ್ಷ ಮೂರೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟು ಬಿಜಾಪುರದಲ್ಲಿ ಉದ್ಯಮವನ್ನು ಮಾಡುವ ಪರಿಸ್ಥಿತಿ ಇಲ್ಲ. ಸರ್ಕಾರ ಯಾವುದನ್ನು ಕೈಗಾರಿಕಾ ಹಿಂದುಳಿದ ಪ್ರದೇಶ ಎಂದು ಘೋಷಣೆ ಮಾಡಿದ್ದೀರಿ, ಅದರಲ್ಲಿ ಪ್ರಾಮಾಣಿಕವಾದ ಚಿಂತನೆ ಇದ್ದರೆ ತಕ್ಷಣ ನೀವು ಹಿಂದುಳಿದ ಪ್ರದೇಶಕ್ಕೆ ಅನುಕೂಲ ಮಾಡುವ ದೃಷ್ಟಿಯಿಂದ ಒಂದು ಹೊಸ ನೀತಿಯನ್ನು ತರಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಬಿ.ಎಲ್. ಶಂಕರ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ಕಾರ್ಜೋಳ್‌ರವರು ಏನು ಹೇಳಿದ್ದಾರೆ, ಇಲ್ಲಿ ಇರುವ ಎರಡು ಇಂಡಸ್ಟ್ರೀಯಲ್ ಏರಿಯಾದಲ್ಲಿ ಒಂದು ಏರಿಯಾದಲ್ಲಿ ಈಗಾಗಲೇ ಸರ್ಕಾರ ಒಂದು ಎಕರೆಗೆ 70 ಸಾವಿರ ರೂಪಾಯಿಗಳನ್ನು ತನ್ನ ಕಾಸ್ಟ್‌ನ್ನು ಬಿಟ್ಟುಕೊಡುತ್ತಿದೆ. ಅಲಿಯಾಬಾದ್‌ನಲ್ಲಿ ಒಂದು ಎಕರೆಗೆ ಎರಡೂವರೆ ಲಕ್ಷ ರೂಪಾಯಿಗಳನ್ನು ತನ್ನ ಕಾಸ್ಟ್‌ನ್ನು ಬಿಟ್ಟು ಈಗಾಗಲೇ ಸರ್ಕಾರ ಜಮೀನನ್ನು ಕೊಡುತ್ತಿದೆ. ಇಲ್ಲಿ ಸ್ಥಾಪನೆ ಮಾಡಬೇಕೆಂದು ಇರುವ ಕೈಗಾರಿಕೆಗಳು ಮುಂದೆ ಬಂದ ಸಂದರ್ಭದಲ್ಲಿ ಅವರಿಗೆ ಏನೇನು ರಿಯಾಯಿತಿಯನ್ನು ತೋರಿಸಬಹುದೋ ಎನ್ನುವುದನ್ನು ಆಗ ಅವರು ಕೈಗಾರಿಕೆಯನ್ನು ಸ್ಥಾಪನೆ ಮಾಡತಕ್ಕಂಥವರು ಮುಂದೆ ಬಂದವರ ಹತ್ತಿರ ಕುಳಿತು ಚರ್ಚೆ ಮಾಡುವ ಸಂದರ್ಭದಲ್ಲಿ ಖಂಡಿತವಾಗಿಯೂ ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಕೈಗಾರಿಕಾ ಸಚಿವರು ಇದನ್ನು ಗಮನಿಸಬೇಕು. ಏಕೆಂದರೆ ಇದು ಇಡೀ ರಾಜ್ಯದಲ್ಲಿ ಈ ಸಮಸ್ಯೆ ಬರುತ್ತದೆ. ಪ್ರಾರಂಭದಲ್ಲಿ ಅಲಾಟ್ ಮಾಡಿರುವುದು 15 ರಿಂದ 25 ಸಾವಿರ ರೂಪಾಯಿಗಳಿಗೆ ಹತ್ತು ವರ್ಷ ಆದಮೇಲೆ ಅದನ್ನು ರಿಜಿಸ್ಟರ್ ಮಾಡಿಸಿಕೊಡಬೇಕು. 99 ಪರ್‌ಸೆಂಟ್ ಅಷ್ಟನ್ನು ಅವರಿಂದ ನೀವು ಕಟ್ಟಿಸಿಕೊಂಡಿರುತ್ತೀರಿ. ಒಂದು ಪರ್‌ಸೆಂಟ್ ಮಾತ್ರ ಬಿಟ್ಟು ಲೀಸ್ ಕಮ್ ಸೇಲ್ ಅಗ್ರಿಮೆಂಟ್‌ನ್ನು ಕೆ.ಐ.ಎ.ಡಿ.ಬಿ.ಯಲ್ಲಿ ಮಾಡಿಸಿಕೊಂಡಿರುತ್ತೀರಿ. ಆದರೆ 25 ಸಾವಿರ ರೂಪಾಯಿಗೆ ಮುಂಚೆ ಅಲಾಟ್ ಮಾಡಿ ಕೊನೆಗೆ ನೀವು ಅವರು ಫೈನಲ್ ಅಮೌಂಟ್ ಕೊಡುವ ಸಂದರ್ಭದಲ್ಲಿ 3 ಲಕ್ಷ 34 ಸಾವಿರ ರೂಪಾಯಿ ಎಂದು ನೋಟೀಸ್ ಕೊಡುವುದಕ್ಕೆ ಶುರುಮಾಡಿದರೆ ಹೇಗೆ? ಏಕೆಂದರೆ ಲ್ಯಾಂಡ್, ಬಿಲ್ಡಿಂಗ್ ಮೆಷಿನ್ ಎಲ್ಲಾ

ಸೇರಿ ಕೆ.ಎಸ್.ಎಫ್.ಸಿ.ಯಿಂದ ಲೋನನ್ನು ತೆಗೆದುಕೊಂಡಿರುತ್ತಾರೆ. 25 ಸಾವಿರಕ್ಕೆ ಮಾತ್ರ ಕೆ.ಎಸ್.ಎಫ್.ಸಿ.ಯವರು ಲೋನನ್ನು ಕೊಟ್ಟಿರುವುದು. ಅವರು ಲೋನನ್ನು ತೀರಿಸುವ ಸಂದರ್ಭದಲ್ಲಿ 3 ಲಕ್ಷ 34 ಸಾವಿರ ರೂಪಾಯಿಗಳಾಗಿದೆ ಎಂದು ಫೈನಲ್ ನೋಟೀಸನ್ನು ಕೊಟ್ಟರೆ ಆ ಅಮೌಂಟನ್ನು ಎಲ್ಲಿಂದ ತರಬೇಕು? ಇಂಡಸ್ಟ್ರಿಗಳು ಮುಚ್ಚಿಹೋಗುವುದಕ್ಕೆ ಸಂಪೂರ್ಣವಾಗಿ ಸರ್ಕಾರದವರೇ ಕಾರಣರಾಗುತ್ತೀರಿ. ಕೆ.ಐ.ಎ.ಡಿ.ಬಿ.ಯವರು ಕಾರಣರಾಗುತ್ತಾರೆ. ಪ್ರಾರಂಭದಲ್ಲಿ ಯೋಚನೆ ಮಾಡಿರುತ್ತೀರಿ, ಅಲಾಟ್‌ಮೆಂಟ್ ಮಾಡುವ ಸಂದರ್ಭದಲ್ಲಿ ಏನು ರೇಟ್ ಇರುತ್ತದೆ, ಆಗಲೇ ತುಂಬಾ ಸ್ಪಷ್ಟವಾಗಿ ತೀರ್ಮಾನ ಮಾಡಿ. ರಸ್ತೆಗೆ, ಚರಂಡಿಗೆ, ದೀಪಕ್ಕೆ, ನೀರಿಗೆ ಎಷ್ಟೆಷ್ಟು ಬೇಕು ಎಂದು ತೀರ್ಮಾನ ಮಾಡಿ. ಆ ರೀತಿ ತೀರ್ಮಾನ ಮಾಡಿಕೊಂಡು ಆ ಪ್ರಕಾರ ಅಲಾಟ್ ಮಾಡಿ. ಹತ್ತು ವರ್ಷದ ನಂತರ ಒಂದು ರೂಪಾಯಿಯೂ ಕೂಡ ಜಾಸ್ತಿ ಮಾಡದೆ ಅವರಿಗೆ ರಿಜಿಸ್ಟರ್ ಮಾಡಿ ಕೊಡಿ. ಇಲ್ಲಿ ಪ್ರಾರಂಭದಲ್ಲಿ ಒಂದು ರೇಟನ್ನು ಮಾಡುತ್ತೀರಿ, ಕೊನೆಗೆ ಒಂದು ರೇಟನ್ನು ಮಾಡುತ್ತೀರಿ. ಬಿಜಾಪುರದಲ್ಲಿ 15 ರಿಂದ 25 ಸಾವಿರ ರೂಪಾಯಿಗಳಿಗೆ ಮುಂಚೆ ಮಾಡಿಕೊಂಡು 2 ಲಕ್ಷದ 23 ಸಾವಿರ ರೂಪಾಯಿ ಎಂದು ಹೇಳಿದ್ದೀರಿ. ಏಕೆಂದರೆ ಕೋರ್ಟಿನ ಬಗ್ಗೆ ಹೇಳುತ್ತೀರಿ. ಹಾಗಾದರೆ ಕೋರ್ಟಿನಲ್ಲಿ ರೇಟು ಎಷ್ಟು ತೀರ್ಮಾನವಾಗಿದೆ? ಏಕೆಂದರೆ ಇಡೀ ರಾಜ್ಯದಲ್ಲಿ ಈ ಸಮಸ್ಯೆ ಬರುತ್ತದೆ. ನೀವು ಸ್ಪಷ್ಟವಾಗಿ ಪ್ರಾಜೆಕ್ಟ್ ರಿಪೋರ್ಟ್‌ನಲ್ಲಿ ಏನು ರೇಟು ಬರುತ್ತೋ ಪ್ರಾರಂಭದಲ್ಲಿ ಕೆ.ಐ.ಎ.ಡಿ.ಬಿ.ಯಲ್ಲಿ ಯಾವ ರೀತಿ ರೇಟನ್ನು ಅಲಾಟ್ ಮಾಡುತ್ತೀರೋ ಅದೇ ರೇಟನ್ನು ಹತ್ತು ವರ್ಷದ ನಂತರ ಅವರಿಗೆ ರಿಜಿಸ್ಟರ್ ಮಾಡಿಕೊಡಬೇಕು. ಒಂದು ರೂಪಾಯಿ ಕೂಡ ಜಾಸ್ತಿ ಮಾಡಬಾರದು. ಈ ತೀರ್ಮಾನವನ್ನು ಕೆ.ಐ.ಎ.ಡಿ.ಬಿ.ಯವರು ತೆಗೆದುಕೊಳ್ಳುವುದಕ್ಕೆ ರಾಜ್ಯಸರ್ಕಾರ ಅವರಿಗೆ ಸೂಚನೆ ಕೊಡುತ್ತೀರಾ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎಲ್. ಶಂಕರ್ :— ಮಾನ್ಯ ಅಧ್ಯಕ್ಷರೇ, 15 ಸಾವಿರದಿಂದ 20 ಸಾವಿರ ರೂಪಾಯಿ ಅಂತಿಮ ಬೆಲೆ ಎಂದು ಸರ್ಕಾರ ಹೇಳಿರಲಿಲ್ಲ. ತಾತ್ಕಾಲಿಕವಾಗಿ ಆ ಬೆಲೆಯನ್ನು ನಿಗದಿ ಮಾಡಿದ್ದು ಎಂದು ಪ್ರಾರಂಭದಲ್ಲಿ ಹೇಳಿದ್ದು. ಆದಾದನಂತರ ಮುಂಚೆ 7 ಸಾವಿರದಿಂದ 9 ಸಾವಿರ ರೂಪಾಯಿಗೆ ಒಂದು ಎಕರೆಗೆ ಜಮೀನು ಎಂದು ಹೇಳಿ ಮೊದಲು ಸರ್ಕಾರ 7500 ರೂಪಾಯಿ ಮತ್ತು 9000 ಸಾವಿರ ರೂಪಾಯಿ ಅವಾರ್ಡ್ ಮಾಡಿದ್ದು. ಆದಾದನಂತರ ವಿಷಯ ಸಿವಿಲ್ ನ್ಯಾಯಾಲಯಕ್ಕೆ ಹೋದ ನಂತರ ಮರು ವಿಚಾರಣೆಗೆ ತೆಗೆದುಕೊಂಡ ನಂತರ ಈ ಜಮೀನು ಸುಮಾರು 120 ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಈ ಜಮೀನಿಗೆ ಕೊಡಬೇಕಾದ ಸಂದರ್ಭ ಬಂತು. 1 ಕೋಟಿ 20 ಲಕ್ಷ ರೂಪಾಯಿಗಳನ್ನು ಸಿವಿಲ್ ನ್ಯಾಯಾಲಯದ ಆಧಾರದ ಮೇಲೆ ಜಮೀನಿಗೆ ಹೆಚ್ಚು ಕೊಡಬೇಕಾಗಿ ಬಂತು. ಅದನ್ನು ಅಂತಿಮವಾಗಿ ಒಂದು ಎಕರೆಗೆ

ಇಷ್ಟು ಎಂದು ಹೇಳಿ ನಾವು ಅಭಿವೃದ್ಧಿ ಶುಲ್ಕಗಳನ್ನು ಮತ್ತು ಅಲ್ಲಿ ಮಾಡಿರುವ ರಸ್ತೆ ಇತರ ಸೌಲಭ್ಯಗಳ ಆಧಾರದ ಮೇಲೆ ಇದನ್ನು ಮಾಡಿದೆ. ಇದು ಸರಿಯಾದ ಕ್ರಮವಲ್ಲ ಎನ್ನುವುದನ್ನು ಅವರ ಸಲಹೆಯನ್ನು ನಾನು ಒಪ್ಪುತ್ತೇನೆ. ಈಗ ನಾವು ಮಾಡುವ ಸಂದರ್ಭದಲ್ಲಿ ಪ್ರತಿ ಅಕ್ವಿಜಿಷನ್‌ಗೆ ಕಾಸ್ಟ್, ಅದನ್ನು ಡೆವಲಪ್‌ಮೆಂಟ್ ಮಾಡುವುದಕ್ಕೆ ಬೇಕಾಗಿರುವ ಕಾಸ್ಟ್ ಇದನ್ನೆಲ್ಲಾ ಸೇರಿ ಅಂತಿಮವಾದ ಬೆಲೆಯನ್ನು ನಿಗದಿ ಮಾಡಬೇಕೆನ್ನುವ ತಮ್ಮ ಸಲಹೆ ಏನು ಇದೆ, ಇದನ್ನು ಗಮನದಲ್ಲಿಟ್ಟುಕೊಂಡು ಮುಂದೆ ನೀತಿಯನ್ನು ರೂಪಿಸುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಹತ್ತು ವರ್ಷದಲ್ಲಿ ಆಗಿರುವ ಅನೇಕ ಇಂಡಸ್ಟ್ರೀಗಳು ಇವತ್ತು ಕರ್ನಾಟಕ ರಾಜ್ಯದಲ್ಲಿ ನಡೆಸುತ್ತಿದ್ದಾರೆ. ಅವರು ಸಂಪೂರ್ಣ 99 ಪರ್‌ಸೆಂಟ್ ನಿಮಗೆ ಕೊಟ್ಟಾಗಿದೆ. ಒಂದು ಪರ್‌ಸೆಂಟ್ ಮಾತ್ರ ಬಾಕಿಯನ್ನು ನೀವು ಇಟ್ಟುಕೊಂಡಿರುತ್ತೀರಿ ಲೀಸ್ ಕಮ್ ಸೇಲ್ ಅಗ್ರಿಮೆಂಟ್ ಮಾಡಿಕೊಂಡು. ಅವರಿಗೆ ರಿಜಿಸ್ಟರ್ ಇನ್ನು ಏಕೆ ಮಾಡಿಕೊಟ್ಟಿಲ್ಲ? 15 ವರ್ಷ 20 ವರ್ಷ ಆಗಿಹೋಗಿದೆ. ಅವರಿಗೆ ಯಾವಾಗ ರಿಜಿಸ್ಟರ್ ಮಾಡಿಕೊಡುತ್ತೀರಿ ಎನ್ನುವುದನ್ನು ಹೇಳಿ.

ಶ್ರೀ ಬಿ.ಎಲ್. ಶಂಕರ್ :— ಪ್ರಶ್ನೆ ನಿರ್ದಿಷ್ಟವಾಗಿ ಬಿಜಾಪುರ ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ಗೆ ಸಂಬಂಧಪಟ್ಟಿರುವುದು. ಜನರಲ್‌ಆಗಿ ರಾಜ್ಯಕ್ಕೆ ಸಂಬಂಧಪಟ್ಟಹಾಗೆ ಕೇಳಿದ್ದಾರೆ. ಸಂಪೂರ್ಣವಾಗಿ ಹಣ ಕಟ್ಟಿ ಅಥವಾ ಬಹುತೇಕ ಹಣ ಕಟ್ಟಿ ಸ್ವಲ್ಪ ಭಾಗ ಉಳಿದಿರುವ ಯಾವುದೇ ಪ್ರಕರಣಗಳು ಇದ್ದರೂ ಕೂಡ ಸದಸ್ಯರ ಸಲಹೆಯನ್ನು ನಾನು ಗಮನಕ್ಕೆ ತೆಗೆದುಕೊಂಡು ಪರಿಶೀಲನೆ ಮಾಡಿ ನಿರ್ಧಾರ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು :— ನಿಯಮಾನುಸಾರವಾಗಿ ನಾವು ಪ್ರಶ್ನೋತ್ತರವನ್ನು 11.15ಕ್ಕೆ ಪ್ರಾರಂಭ ಮಾಡಿದ್ದೇವೆ. ಈಗ ಒಂದು ಗಂಟೆ ಐದು ನಿಮಿಷ ಹೆಚ್ಚಾಗಿದೆ. ಇವತ್ತು ಕೆಲವು ವಿಶೇಷವಾದಂತಹ ಪ್ರಶ್ನೆಗಳು ಬಂದವು. ಸಮಯ ಅಗತ್ಯಕ್ಕಿಂತ ಹೆಚ್ಚು ವಿಳಂಬ ಆದುದರಿಂದ ಉಳಿದ 5-6 ಪ್ರಶ್ನೆಗಳನ್ನು ಇವತ್ತಿನ ಮಟ್ಟಿಗೆ ವಿಶೇಷ ಪ್ರಕರಣ ಎಂದು ನಾನು ಅಲೋ ಮಾಡುತ್ತೇನೆ. ನಾಳೆಯಿಂದ ಒಂದು ಗಂಟೆಯ ಒಳಗೆ ಪ್ರಶ್ನೋತ್ತರ ಮುಗಿಯಬೇಕು. ಒಂದು ಗಂಟೆ ನಂತರ ಉಳಿದಂತಹ ಪ್ರಶ್ನೆ ಏನು ಇರುತ್ತದೆ, ಅದನ್ನು ಲ್ಯಾಪ್ಸ್ ಮಾಡುತ್ತೇನೆ. ಹಿಂದಿನ ಬೆಂಚ್‌ಗಳಲ್ಲಿರತಕ್ಕಂಥ ಅನೇಕ ಜನ ಮಾನ್ಯ ಸದಸ್ಯರುಗಳು ಇವತ್ತು ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಹಾತುರರಾಗಿದ್ದರು. ನಾನು ನಿಮಗೆ ಅವಕಾಶ ಕೊಡುವುದು ಆಗಲಿಲ್ಲ. ಕಾರಣ ನನಗಿಂತ ನಿಮಗೇ ಚೆನ್ನಾಗಿ ಗೊತ್ತು. ನೀವು ಅನ್ಯಥಾ ಭಾವಿಸಬಾರದು ಎಂದು ಹೇಳಿ ಉಳಿದಂತಹ ಪ್ರಶ್ನೆಗಳನ್ನು

ಈಗ ಅಲೋ ಮಾಡುತ್ತಿದ್ದೇನೆ. ನಾಳೆ ಪ್ರಶ್ನೋತ್ತರಕ್ಕೆ ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ಹೇಗೆ ನಡೆದುಕೊಳ್ಳಬೇಕು ಎಂದು ಹೇಳುವುದನ್ನು ನಿಮಗೇ ಬಿಡುತ್ತೇನೆ.

ಬಾಗೇಪಲ್ಲಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು.

37(249) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬಾಗೇಪಲ್ಲಿ ಪಟ್ಟಣಕ್ಕೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ವತಿಯಿಂದ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆ ಸರ್ಕಾರಕ್ಕಿದೆಯೇ?

2. ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :—

1. ಹೌದು.

2) ಕೊಳವೆ ಬಾವಿಗಳನ್ನು ಆಧರಿಸಿ ನೀರು ಸರಬರಾಜು ಅಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸಲು ರೂ. 135.00 ಲಕ್ಷದ ಅಂದಾಜನ್ನು ಡ್ಯಾನಿಡಾ ಸಂಸ್ಥೆಯ ನೆರವಿನಿಂದ ತೆಗೆದುಕೊಳ್ಳಲು ರೂಪಿಸಲಾಗಿತ್ತು. ಡ್ಯಾನಿಡಾ ಸಂಸ್ಥೆಯು ಈ ಯೋಜನೆಗೆ ಹಣಕಾಸಿನ ಸಹಾಯವನ್ನು ನೀಡದೇ ಇದ್ದ ಕಾರಣ ಯೋಜನೆಯನ್ನು ತೆಗೆದುಕೊಳ್ಳಲಾಗಲಿಲ್ಲ. ಈಗ ಇತರೆ ಹಣಕಾಸಿನ ಮೂಲಗಳಿಂದ ಆರ್ಥಿಕ ಸಹಾಯವನ್ನು ಪಡೆಯಲು ಪರಿಶೀಲಿಸಲಾಗುತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಅಧ್ಯಕ್ಷರೇ, ಉತ್ತರ ಕೊಟ್ಟಿದ್ದಾರೆ. ಮೂರು ವರ್ಷದಿಂದ ಇದೇ ಉತ್ತರ ಬರುತ್ತಿದೆ. ಹಿಂದೆ ಒಂದು ಅಂದಾಜು ಎಲ್ಲಾ ತಯಾರು ಮಾಡಿದರು. ಅವರು ಹಣ ಕೊಡಲಿಲ್ಲ ಎಂದು ಹೇಳಿ ಮೂರು ವರ್ಷಗಳಿಂದ ಮತ್ತೆ ಈಗ ಅದನ್ನು ಮುಂದಕ್ಕೆ ಹಾಕಿ, ಇನ್ನೊಂದು ಯಾವುದಾದರೂ ಒಂದು ಯೋಜನೆಯಲ್ಲಿ ತೆಗೆದುಕೊಳ್ಳಲು ಈಗ ಇತರೆ ಹಣಕಾಸಿನ ಮೂಲಗಳಿಂದ ಆರ್ಥಿಕ ಸಹಾಯವನ್ನು ಪಡೆಯಲು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದಾರೆ. ದಯವಿಟ್ಟು ಇನ್ನು ನಿಮಗೆ ಪರಿಶೀಲನೆ ಮಾಡಲು ಸಮಯ ಇಲ್ಲ. ನಿಮಗೆ ಇರುವುದು ಇನ್ನು ಆರು ತಿಂಗಳ ಸಮಯ. ಅದೇನಾದರೂ ನಿರ್ದಿಷ್ಟವಾಗಿ ಒಂದು